ಮನೆಯ ತೋಪನೂ ಒಬ್ಬ, ತೋಪನನ್ನು ಕಂಡವನೇ ಮಾಯಿಲನ ಅಳಿಯ ಆತನನ್ನು ಎಬ್ಬಿಸಿ ವಿಷಯ ತಿಳಿಸಿದಾಗ ತೋಪ ಭೂತವನ್ನು ಬಾವಿಯಿಂದ ಮೇಲೆತ್ತಲು ಬಾವಿಕಡೆಗೆ ನಿದ್ದೆಕಣ್ಣಲ್ಲೇ ಓಡಲಾರಂಭಿಸಿದ.

ತೋಪ ಏಳುಕೆರೆ ಈಜುವ ಜಾಣ. ಬಾವಿಯಲ್ಲಿ ಮಾಟೆ ಸೇರಿದ ಹೆಣ ಎತ್ತಬೇಕಾದರೆ ನಾಲ್ಕೂರಿನವರಿಗೂ ಬೇಕಾದವ ತೋಪ. ಬಾವಿ ತಳ ಸೇರಿದ್ದ ಕೊಡಪಾನ, ಬಾಲ್ದಿ ಇವುಗಳನ್ನೆಲ್ಲಾ ತೋಪ, ಲೀಲಾಜಾಲವಾಗಿ ಮೇಲೆ ತರಬಲ್ಲ. ಎಂತಹ ಆಳದ ಬಾವಿಯಾದರೂ ಸೈ. ಆದರೆ ಆತ ಇತ್ತೀಚೆಗೆ ಕೊಡಪಾನ, ಬಾಲ್ದಿಗಳನ್ನೆತ್ತುವ ಕೆಲಸಗಳಿಗೆ ಒಪ್ಪುವುದೇ ಇಲ್ಲ. ಅದು ಆತನ ಸಾಮರ್ಥ್ಯಕ್ಕೆ ಭಾರೀ ಪುಡಿ ಕೆಲಸಗಳೆಂದು ಆತನ ಅನಿಸಿಕೆ.

ಈ ದಿನ ಕಲ್ಲುರ್ಟಿಯ ಅದೃಷ್ಟವೇ ಸರಿ. ತೋಪ ಈ ಕೋಲಕ್ಕೆ ಬರುವವನೇ ಅಲ್ಲ. ಆತ ಹೆಂಡತಿಯನ್ನೇ ಕಳುಹಿಸಿಕೊಡುವವ. ಆದರೆ ಹೊರಡುವ ಸಮಯಕ್ಕೇ 'ನನಗೆ ಮನೆಗಾಗುವುದಿಲ್ಲ, ನೀವೇ ಹೋಗಿಬಿಡಿ' ಎಂದು ರಾಗವೆಳೆದಿದ್ದಳು ಆಕೆ. ಸಂದರ್ಭಕ್ಕೇ ಕೈಕೊಡುವ ಹೆಂಗಸರ ಈ ಮುಟ್ಟಿನ ಬಗ್ಗೆ ಮುನಿಸಿಕೊಂಡೇ ಕೋಲಕ್ಕೆ ಬಂದಿದ್ದಾತ.

ತೋಪ ನಿದ್ರಾಲೋಕದಿಂದ ಈ ಲೋಕಕ್ಕೆ ಬಂದು ಬಾವಿಗೆ ಧುಮುಕುವಷ್ಟರಲ್ಲಿ ಭೂತ ಸಾಕಷ್ಟು ನೀರು ಕುಡಿದು ಅಡಿಕಂತುವ ಹಂತದಲ್ಲಿತ್ತು. ತೋಪ ಬಾವಿ ಹಾರಿದವನೇ ಮೊದಲು ಹಿಡಿದದ್ದು ಭೂತದ ಅಣಿಯನ್ನು, ಭೂತವನ್ನು ದರ ದರ ಎಳೆದುಕೊಂಡೇ ಅಂಕಣದಲ್ಲಿನ ಆಸರೆ ಪಡೆದವನನ್ನು ಮೇಲೆತ್ತಲು ಬಾವಿಗೆ ಜೋಡಿಸಿದ್ದ ಏತದ ಮರಿಗೆಯನ್ನ ನೀರಿಗಿಳಿಸಿದಾಗ ತೋಪ ಬಾವಿಯಿಂದಲೇ ಅಬ್ಬರಿಸಿದ್ದ. ತೋಪ ಆಗಾಗ್ಗೆ ಭೂತವನ್ನಿಡಿದು ಈಜಿಕೊಂಡೇ ಬಾವಿ ಸುತ್ತಿ ಅಂಕಣ ಕಲ್ಲಲ್ಲಿ ನಿಂತು 'ಏತದ ಮರಿಗೆ ಬೇಡ ಹಗ್ಗ ಕಳಿಸಿಬಿಡಿ' ಎಂದು ಅಬ್ಬರಿಸುತ್ತಿದ್ದ.

ಎಲ್ಲರಲ್ಲೂ ಆತಂಕ; ಗಡಿಬಿಡಿ. ಬಾವಿಯೊಳಕ್ಕೆ ಹಗ್ಗ ಕಳಿಸುವಷ್ಟರಲ್ಲಿ ತೋಪನ ಅಸಹನೆ ಮಿತಿಮೀರಿತ್ತು. ಏತಕ್ಕೆ ಜೋಡಿಸಿದ ಹಗ್ಗವನ್ನೇ ಆಧಾರವಾಗಿಟ್ಟುಕೊಂಡು ಬಾವಿಯ ಅಂಕಣಕಲ್ಲುಗಳನ್ನೇರಿ ಬಾವಿಯಂಚಿಗೆ ಬಂದಾಗ ಬಾವಿಯ ಮೇಲಿದ್ದ 'ಪ್ರೇಕ್ಷಕ'ರೆಲ್ಲ ಭೂತವನ್ನು ತಮ್ಮ ತೆಕ್ಕೆಯೊಳಕ್ಕೆ ಎಳೆದುಕೊಂಡು ಬಿಟ್ಟಿದ್ದರು.

ಮಾಚು ಸೆರಗನ್ನು ಬಾಯಿಗೆ ಅಡ್ಡ ಹಿಡಿದು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ತೋಪ ಭೂತಕ್ಕೇನಾಗುವುದಿಲ್ಲ ಎಂದು ಆಕೆಯನ್ನು ಸಮಾಧಾನಿಸಿದವನೇ ಭೂತದ ನೀರು ಕಾರಿಸಲು ಅವಸರಪಡಿಸತೊಡಗಿದ. ತಾನೆ ಮುಂದೆ ನಿಂತು ಭೂತವನ್ನು ಕವಚಿ ಮಲಗಿಸಿ ನೀರು ಕಾರಿಸತೊಡಗಿದ. ಭೂತ ಬಸ ಬಸ ನೀರು ಕಾರತೊಡಗಿತು.

ಮಾಚುವಿನ ಅಳು ತಾರಕಕ್ಕೇರುತ್ತಿತ್ತು. ಕಲ್ಲುರ್ಟಿ ನಿಧಾನಕ್ಕೆ ಕಣ್ಣು ಬಿಡತೊಡಗಿತು. ಭೂತದ ಸುತ್ತ ನಿಂತವರಿಗೂ ಹೊಸ ಉಸಿರಿನ ಅನುಭವ. ಗುಸು ಗುಸು. ಪಿಸಿ ಪಿಸಿ ಮಾತನಾಡುತ್ತಿದ್ದವರೂ ಭೂತದ ಕಣ್ಣಿನ ಚಲನೆಯನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದರು.

ಎಲ್ಲರೂ ಕಲ್ಲುರ್ಟಿಯ ಸುತ್ತಲೇ ನೆರೆದು ಅದರ ಯೋಗಕ್ಷೇಮ ವಿಚಾರಿಸುತ್ತಿದ್ದರೆ, ಕೃಷ್ಣಪ್ಪ ಮಾತ್ರ ಅಂಗಳದಲ್ಲಿ ಕೋಳಿ ಹಿಡಿದೇ ಕುಸಿದು ಬಿದ್ದ ಅಪ್ಪನ ಮುಖಕ್ಕೆ ನೀರು ಚಿಮುಕಿಸುತ್ತಾ ಅಪ್ಪನನ್ನು ಉಪಚರಿಸುತ್ತಿದ್ದ.

ಅಂಗಳದಲ್ಲಿ ಹೊಂಗಾರೆ ಮರಕ್ಕೆ ಬಿಗಿಯಲ್ಪಟ್ಟಿದ್ದ ಹರಕೆಯ ಹುಂಜಗಳು ಆಗಲೇ 'ಕ್ಕೋ... ಕ್ಕೋ... ಕ್ಕೋ' ಆರಂಭಿಸಿದ್ದವು. ಬಾನದಲ್ಲಿ ಬೆಳ್ಳಿ ಮೂಡಿತ್ತು.

⌘